**<u>ಸಾಕ್ಷಿಯನ್ನು ದಿಃ 28.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 5 ರಿಂದ 7 ನೇ ಪ್ರತಿವಾದಿ ಪರ ಶ್ರೀ ಆರ್.ಕೆ. ವಕೀಲರಿಂದಃ-</u>**

ನಾನು ಕನ್ನಡದಲ್ಲಿ ಸಹಿ ಹಾಕುತ್ತೇನೆ. ದಿಃ 17.04.2009 ರ ನೊಂದಾಯಿತ ಕ್ರಯ ಪತ್ರದ ಮೂಲಕ ಕೊತ್ತೆಗಾಲ ಗ್ರಾಮದ ಸರ್ವೆ ನಂ. 140/2 ರಲ್ಲಿ 5 ಎಕರೆ 7 ಗುಂಟೆ ಪೈಕಿ 5 ಎಕರೆ ಜಮೀನನ್ನು ಸಣ್ಣೇಗೌಡ ಮತ್ತು ಅವರ ಕುಟುಂಬದವರಿಂದ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ ಅದನ್ನು ಆಧಾರ ಮಾಡಿದ್ದು ಎನ್ನುತ್ತಾರೆ. ಕ್ರಯ ಪತ್ರದ ಅಧಾರದ ಮೇಲೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನಿಗೆ ಸಂಪೂರ್ಣ ಮಾಲೀಕನಾಗಿದ್ದೆ ಎಂದರೆ ಸರಿ. ಅದು ನನ್ನ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸಾಕ್ಷಿಗೆ ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಹಿ ತೋರಿಸಲಾಗಿ ಅದನ್ನು ನೋಡಿ ಗುರುತಿಸುತ್ತಾರೆ ಸಾಕ್ಷಿಗೆ ಇನ್ನೊಂದು ದಿಃ 29.10.2010 ರ ಕ್ರಯ ಪತ್ರದ ಆನ್ ಲೈನ್ ದೃಡೀಕೃತ ದಾಖಲೆ ತೋರಿಸಿ ಅದರಲ್ಲೂಯೂ ಸಹಿ ಇದೆ ಎಂದು ಕೇಳಿದ ಪ್ರಶ್ನೆಗೆ ಆ ದಾಖಲೆಯನ್ನು ನೋಡಿ ಸಹಿ ಕಾಣಿಸುತ್ತಿಲ್ಲ ಎನ್ನುತ್ತಾರೆ. ಅದರಲ್ಲಿ ನನ್ನ ಮಕ್ಕಳಾದ ನಾಗೇಂದ್ರ ಕೆ.ಎಂ. ಶಿವಮೂರ್ತಿ ಕೆ.ಎಂ ಮತ್ತು ಮುಕುಂದ ಕೆ.ಎಂ. ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ದಿಃ 29.04.2010 ರಲ್ಲಿ ರಿಜಿಸ್ಟರ್ ಕ್ರಯ ಪತ್ರದ ಮೂಲಕ 4,66,000/- ಡಾಃಚಂದ್ರೇಶಖರ್ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ಅಧಾರ ಮಾಡಿರುತ್ತೇನೆ ಕ್ರಯ ಮಾಡಿಲ್ಲ ಎನ್ನುತ್ತಾರೆ. ಸದರಿ ದಾಖಲೆಯಲ್ಲಿನ ಸಹಿ ಪೋಟೊಗಳನ್ನು ನೋಡಿದರೆ ಗುರುತಿಸುವಿರಾ ಎಂದರೆ ಕಣ್ಣು ಕಾಣುವುದಿಲ್ಲ ಎನ್ನುತ್ತಾರೆ. ಎಷ್ಟು ವರ್ಷಕ್ಕೆ ಅಧಾರ ಎಂದು ದಾಖಲೆಯಲ್ಲಿ ಬರೆಸಿಲ್ಲ. 4,66,000/- ರೂ. ಹಣವನ್ನು ಯಾವಾಗ ಹಿಂದಿರುಗಿಸಬೇಕೆಂದು ಸದರಿ ದಾಖಲೆಯಲ್ಲಿ ಬರೆದಿದೆಯಾ ಎಂದರೆ ಬರೆದಿಲ್ಲ ಎನ್ನುತ್ತಾರೆ.

ಸದರಿ ದಾಖಲೆಯಕಲ್ಲಿ ಕ್ರಯ ಪತ್ರದ ಎಂದು ಬರೆದಿದೆ, 4,66,000 /- ಹಣ ಕೊಡಬೇಕು ಎಂದು ಸಹ ಬರೆದಿದೆ. ಹಾಗೆ ಏನಾದರೂ ಹಣ ಕೊಟ್ಟ ನಂತರ ಬಿಡಬೇಕೆಂದು ಯಾವುದೆ ದಾಖಲೆ ಆಗಿಲ್ಲ. ಸದರಿ ಕ್ರಯ ಪತ್ರದ ಅಧಾರದ ಮೇಲೆ 5 ರಿಂದ 7 ನೇ ಪ್ರತಿವಾದಿಗಳಿಗೆ ಸದರಿ ಖಾತೆ ಆಗಿರುತ್ತದೆ ಎಂದರೆ ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಹಾಗೆ ಖಾತೆ ಮಾಡಿಸಿಕೊಂಡ ಬಗ್ಗೆ ಪ್ರಶ್ನೆ

ಮಾಡಿದ್ದೇನೆ ಆದರೆ ಪ್ರತಿವಾದಿಗಳು ಉತ್ತರ ನೀಡಿಲ್ಲ ಎನ್ನುತ್ತಾರೆ. ಈ ಸ್ವತ್ತನ್ನು ಖರೀದಿಸಿದ ನಂತರ 5 ನೇ ಪ್ರತಿವಾದಿ ಗಂಡನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಅವರ ಮರಣಾ ನಂತರ ಪೌತಿ ಖಾತೆ ಅವರ ಹೆಂಡತಿ ಮಕ್ಕಳು 5 ರಿಂದ 7 ನೇ ಪ್ರತಿವಾದಿಗಳ ಹೆಸರಿಗೆ ಆಗಿರುತ್ತದೆ ಎಂದರೆ ಸರಿ.

ಸರ್ವೆ ನಂ. 139 ರಲ್ಲಿ 1 ಎಕರೆ 8 ಗುಂಟೆ ಇದ್ದು, ಅಕ್ಕಯ್ಯಮ್ಮ ಮತ್ತು ಅವರ ಕುಟುಂಬದವರಿಂದ ದಿಃ 11.06.2010 ರ ನೊಂದಾಯಿತ ಕ್ರಯ ಪತ್ರದ ಮೂಲಕ ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನನ್ನ ಹೆಸರಿಗೆ ಖಾತೆ ಕಂದಾಯ ಆಗಿರುತ್ತದೆ ಎಂದರೆ ಸರಿ . ಅದಕ್ಕೆ ನಾನು ಸಂಪೂರ್ಣ ಮಾಲೀಕನಾಗಿದ್ದು, ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಕ್ರಯ ಪತ್ರದ ಅನ್ ಲೈನ್ ದೃಡೀಕೃತ ಪ್ರತಿ ತೋರಿಸಲಾಗಿ ಅದರಲ್ಲೂ ಸಹ ಸಹಿ ಕಾಣಿಸುವುದಿಲ್ಲ ಎನ್ನುತ್ತಾರೆ. ಡಾಃ ಚಂದ್ರಶೇಖರ್ ರವರಿಗೆ ದಿಃ 31.07.2017 ರಲ್ಲಿ ಕ್ರಯ ಮಾಡಿರುತ್ತೇನೆ ಎಂದರೆ ಸಾಕ್ಷಿ ಆಧಾರ ಎಂದು ಮಾಡಿರುತ್ತೇನೆ ಎನ್ನುತ್ತಾರೆ. ಕ್ರಯ ವ್ಯವಹಾರ 2 ಲಕ್ಷ ರೂ. ಎಂದರೆ ಸರಿ. ಸದರಿ ಕ್ರಯ ಪತ್ರದ ಅಧಾರದ ಮೇಲೆ ಡಾಃ ಚಂದ್ರಶೇಖರ್ ರವರ ಹೆಸರಿಗೆ ಖಾತೆ ಕಂದಾಯ ಆಗಿರುತ್ತದೆ ಎಂದರೆ ಸರಿ. ಅವರ ಪೌತಿ ಖಾತೆ ಹೆಂಡತಿ ಮಕ್ಕಳ ಹೆಸರಿಗೂ ಖಾತೆ ಆಗಿರುತ್ತದೆ ಎಂದರೆ ಸರಿ. ಆಧಾರ ಎಂದು ತೋರಿಸಲು ನಮ್ಮ ಬಳಿ ಯಾವುದೆ ದಾಖಲೆ ಇಲ್ಲ. 5 ನೇ ಪ್ರತಿವಾದಿ ಗಂಡ ಡಾಃ ಚಂದ್ರಶೇಖರ ಸೌದಿ ಅರೇಬಿಯಾದಲ್ಲಿ ಡಾಕ್ಟರ್ ಆಗಿದ್ದರು ಎಂದರೆ ಸರಿ. ಅವರು ಮೂಲತಃ ಮಂಡ್ಯ ಜಿಲ್ಲೆ, ಕೆ.ಎಂ. ದೊಡ್ಡಿ ಹೋಬಳಿ, ಅಣ್ಣೂರು ಗ್ರಾಮದವರು ಎಂದರೆ ಸರಿ. ಅವರು ನನಗೆ ಕ್ರಯದ ವ್ಯವಹಾರ ಆಗುವ 1 ವರ್ಷಕ್ಕೂ ಮೊದಲು ಪರಿಚಯ ಇದೆ. ವೈದ್ಯರಿಗೆ ನನಗೆ ಮೋಸ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿ ಆದರೆ ಅವರ ಹೆಂಡತಿ ಮಕ್ಕಳಿಗೆ ಇದೆ ಎನ್ನುತ್ತಾರೆ.

ವಾದಿ ಶಶಿಕಲಾ ರ ಮದುವೆಯನ್ನು ನಾನೇ 2000 ನೇ ಸಾಲಿನಲ್ಲಿ ಮಾಡಿರುತ್ತೇನೆ. ಅವರಿಗೆ ಇಬ್ಬರು ಮಕ್ಕಳು. ಅಳಿಯ ಫಾರ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ನಾನು, ನನ್ನ ಅಳಿಯ ಎಲ್ಲರೂ 2-3 ವರ್ಷಗಳಿಂದ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿಯಲ್ಲ. ಕೇಸ್ ಅನ್ನು ಹಾಕುವವರೆಗೂ ಚೆನ್ನಾಗಿ ಇದ್ದರು, ಆ ನಂತರ ಮನೆಗೆ ಹೋಗಿ ಬರುವುದನ್ನು ನಿಲ್ಲಿಸಿರುತ್ತಾರೆ. ಮೂವರು ಗಂಡು ಮಕ್ಕಳ 2 ರಿಂದ 4 ನೇ

ಪ್ರತಿವಾದಿಯವರ ಮದುವೆಯನ್ನು ನಾನೇ ಮಾಡಿರುತ್ತೇನೆ. ಅವರಿಗೂ ಮಕ್ಕಳು ಇದ್ದಾರೆ. ನಾನು, ಗಂಡು ಮಕ್ಕಳು, ಮತ್ತು ಮೊಮ್ಮಕ್ಕಳು ಎಲ್ಲರೂ ಒಟ್ಟಿಗೆ ಇರುತ್ತೇವೆ. ನನ್ನ ಮಕ್ಕಳು ವಿಧ್ಯಾಭ್ಯಾಸ ಮಾಡಿರುತ್ತಾರೆ. ನಾನು ಯಾವುದೆ ವ್ಯವಹಾರ ಮಾಡಿದರೂ ಮಕ್ಕಳು, ಗಂಡು ಮಕ್ಕಳೊಂದಿಗೆ ತೀರ್ಮಾಣ ಮಾಡಿ ಮಾಡುವುದು ಎಂದರೆ ಸರಿ. ಯಾವುದೆ ದಾಖಲೆಗೆ ಪೂರ್ವದಲ್ಲಿ ದಾಖಲೆಯನ್ನು ಓದಿಯೆ ಸಹಿ ಹಾಕುವುದು ಎಂದರೆ ಸರಿ. ಸಾಕ್ಷಿ ಮುಂದುವರೆದು ಓದ ಸಹಿ ಪಡೆದಿರಲಿಲ್ಲ, ನಂಬಿಕೆ ಮೇಲೆ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನನ್ನ ಜೀವ ಮಾನದಲ್ಲಿ ಬೇರೆ ಯಾವುದೆ ದಾಖಲೆಗೆ ಓದದೆ ಸಹಿ ಮಾಡಿಲ್ಲ. ದಾಖಲೆಯನ್ನು ಓದಿಸದೆ ನಂಬಿಕೆಯ ಮೇಲೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಓದದೆ ಸಹಿ ಮಾಡುತ್ತಾರೆಯೆ ಎಂದರೆ ಅದು ನನಗೆ ಗೊತ್ತಿಲ್ಲ, ಅದು ಅವರನ್ನು ಕೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಕೊತ್ತೆಗಾಲ ಸರ್ವೆ ನಂ. 103 ರಲ್ಲಿ 2 ಎಕರೆ 18 ಗುಂಟೆ ಜಮೀನಿನ ಖಾತೆ ಕಂದಾಯ ನನ್ನ ಹೆಸರಿನಲ್ಲಿ ಇದೆ. ಅದರ ಸಂಪೂರ್ಣ ಮಾಲೀಕ ಎಂದರೆ ಸರಿ. ಅದು ನನ್ನ ಸ್ವಯಾರ್ಜಿತ ಎಂದರೆ ಸಾಕ್ಷಿ ಅದು ನನ್ನ ಪಿತ್ರಾರ್ಜಿತ ಅಸ್ತಿ ಎನ್ನುತ್ತಾರೆ. ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆ ಏನಾದರೂ ಕೊಟ್ಟಿದ್ದಾರೆ ಎಂದು ದಾಖಲೆ ಇಲ್ಲ ಎನ್ನುತ್ತಾರೆ. ಈ ಕೇಸ್ ಅನ್ನು ನಾನು, ವಾದಿ, ನನ್ನ ಮಕ್ಕಳು, ಗಂಡು ಮಕ್ಕಳು ಕೂತು ಮಾತನಾಡಿ ಕೇಸು ಹಾಕಿರುವುದು ಎಂದರೆ ಸರಿಯಲ್ಲ. ನಾನು ಒಬ್ಬರಿಗೊಬ್ಬರು ಶಾಮಿಲಾಗಿ ಈ ಕೇಸ್ ಅನ್ನು ಹಾಕಿಸಿದ್ದೇವೆ ಎಂದರೆ ಸರಿಯಲ್ಲ. ಓ.ಎಸ್ ನಂ.226/2022 ರಂತೆ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಇನ್ನೊಂದು ದಾವೆಯನ್ನು 5 ರಿಂದ 7 ನೇ ಪ್ರತಿವಾದಿಗಳು ಹಾಕಿರುವುದು ನನಗೆ ಗೊತ್ತಿಲ್ಲ. ಹುಣಸೂರಿನ ಸಂದೀಪ್ ಲಾಯರ್ ನನಗೆ ಗೊತ್ತಿಲ್ಲ. ಆ ಕೇಸ್ ನಲ್ಲಿ ಸಂದೀಪ್ ಲಾಯರ್ ರವರನ್ನು ನೇಮಿಸಿಕೊಂಡು ವಕಾಲತ್ ಹಾಕಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿಲ್ಲದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕೇಸ್ ನಲ್ಲಿ ವಕೀಲರ ಮೂಲಕ ವಕಾಲತ್ ಸಲ್ಲಿಸಿ ಕೇಸ್ ನಡೆಸುತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 20.06.2011 ರಂದು ಸರ್ವೆ ನಂ. 103 2 ಎಕರೆ 18 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಮಕ್ಕಳು ಸೇರಿ ರಿಜಿಸ್ಟರ್ ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ನನಗೆ ನೆನಪಿಲ್ಲ ಎನ್ನುತ್ತಾರೆ. ಸದರಿ ಅಗ್ರಿಮೆಂಟ್ ಗೆ 15 ಲಕ್ಷ ರೂ. ಗಳಿಗೆ ಮಾರಾಟ ಮಾಡಲು ಒಪ್ಪಿ 14 ಲಕ್ಷ ರೂ. ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಇನ್ನೂ ದುರಸ್ತು ಆಗಿಲ್ಲ, ಇನ್ನೂ ನಕ್ಷೆ ಆಗಿಲ್ಲ ಎಂದು ರಿಜಿಸ್ಟರ್ ಮಾಡಿ ಕೊಡಲು ಮುಂದೂಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ಸದರಿ ಅಸ್ತಿಯ ಮೇಲೆ ಒಟ್ಟು 68,90,000/- ರೂ. ಹಣವನ್ನು ಹಿಂಬರಹ ಬರೆದುಕೊಟ್ಟು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 24.02.2020 ರಲ್ಲಿ ಸಾಕ್ಷಿದಾರರ ಸಮಕ್ಷಮ ಪತ್ರವನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈಗ ಎಲ್ಲಾ ಹಣವನ್ನು ಪಡೆದುಕೊಂಡು 5 ರಿಂದ 7 ನೇ ಪ್ರತಿವಾದಿಗಳು ಹೊರ ದೇಶದಲ್ಲಿ ಇರುವ ಒಂದೇ ಕಾರಣದಿಂದ ಅವರಿಗೆ ಮೋಸ ಮಾಡಲು ಸಂಚು ಮಾಡಿದ್ದೇವೆ ಎಂದರೆ ಸರಿಯಲ್ಲ. ಡಾಃ ಚಂದ್ರೇಶಖರ್ ನಮ್ಮನ್ನು ನಂಬಿದಕ್ಕೆ ಅವರಿಗೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಮ್ಮ ಮಗಳಿಗೆ ಯಾವುದೇ ಒಟ್ಟು ಕುಟುಂಬದ ಆಸ್ತಿ ಇಲ್ಲ ಆದರೂ ಆಕೆಯನ್ನು ಎತ್ತಿ ಕಟ್ಟಿ ಸದರಿ ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಈ ಕೇಸ್ ನಲ್ಲಿ ವಾದಿಯಾದ ನನ್ನ ಮಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.